# ಆಮ್‌ಸ್ಟರ್‌ಡ್ಯಾಂ ಡಂಜನ್

## ಗಟ್ಟಿ ಗುಂಡಿಗೆಯವರಿಗೆ ಮಾತ್ರ!




**ಮಧ್ಯಕಾಲೀನ ಯುಗದಲ್ಲಿ ಯುರೋಪ್‌ನಲ್ಲಿ ಅಪರಾಧಿಗಳಿಗೆ ನೀಡಲಾಗುತ್ತಿದ್ದ ಚಿತ್ರಹಿಂಸೆಗಳನ್ನು ವರ್ತಮಾನದಲ್ಲಿ ಮರು ಸೃಷ್ಟಿಸುವ ಭ್ರಾಮಕ ಲೋಕ 'ಆಮ್‌ಸ್ಟರ್‌ಡ್ಯಾಂ ಡಂಜನ್'. ಇಲ್ಲಿ ದೇಹದಿಂದ ನೆತ್ತರು ಸೋರುತ್ತದೆ. ಹೆಣಗಳು ಎದುರಾಗುತ್ತವೆ. ರಕ್ತದ ವಾಸನೆ ಮೂಗಿಗಡರುತ್ತದೆ. ಮಾಟಗಾತಿ ಕಣ್ಣೆದುರು ಸುಳಿಯುತ್ತಾಳೆ.**

■ ಜಿ. ಪದ್ಮಾ ಕಾವೂರು

ನೆದರ್ಲೆಂಡ್ಸ್‌ನ ಹಲವು ಪ್ರವಾಸಿ ಆಕರ್ಷಣೆಗಳಲ್ಲಿ 'ಆಮ್‌ಸ್ಟರ್‌ಡ್ಯಾಂ ಡಂಜನ್' ಕೂಡ ಒಂದು. ಮಧ್ಯಕಾಲೀನ ಯೂರೋಪಿಯನ್ ನ್ಯಾಯಾಲಯಗಳು ಅಪರಾಧ ಪ್ರಮಾಣ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ಆಧರಿಸಿ ಅಪರಾಧಿಗಳಿಗೆ ಚಿತ್ರಹಿಂಸೆ ನೀಡಲು ಆದೇಶ ನೀಡುತ್ತಿದ್ದವು. ಹೀಗೆ ಚಿತ್ರಹಿಂಸೆ ನೀಡುವುದರ ಮೂಲಕ ಸಾರ್ವಜನಿಕರಲ್ಲಿ ಭಯವನ್ನುಂಟುಮಾಡಿ ಸುಧಾರಣೆ ತರುವುದು ನ್ಯಾಯಾಲಯಗಳ ಉದ್ದೇಶವಾಗಿತ್ತು. ಆ ಕಾಲದಲ್ಲಿ ನಡೆದ ಇತಿಹಾಸದ ತುಣುಕುಗಳನ್ನು ಇಂದಿನ ಜನರಿಗೆ ತೋರಿಸುವ ಉದ್ದೇಶದಿಂದ 'ಆಮ್‌ಸ್ಟರ್‌ಡ್ಯಾಂ ಡಂಜನ್' ಹೆಸರಿನ ಭ್ರಾಮಕ ಲೋಕ ಜನ್ಮತಾಳಿದೆ.

> **ಅಲ್ಲಿ ಅಳು, ರಕ್ತ, ಚೀರಾಟ, ಶವ, ಮಾಟಗಾತಿ...**

ಎಪ್ಪತ್ತೈದು ಲಕ್ಷ ಯೂರೋ ವೆಚ್ಚದಲ್ಲಿ ನಿರ್ಮಿಸಲಾಗಿರುವ 'ಆಮ್‌ಸ್ಟರ್‌ಡ್ಯಾಂ ಡಂಜನ್' 2006ರಿಂದಲೂ ಕಾರ್ಯ ನಿರ್ವಹಿಸುತ್ತಿದೆ. 'ಡಚ್ ರಿಫಾರ್ಮ್ಡ್ ಚರ್ಚ್' ಒಡೆತನದಲ್ಲಿರುವ 'ಆಮ್‌ಸ್ಟರ್‌ಡ್ಯಾಂ ಡಂಜನ್' ಅನ್ನು ಮೆರ್ಲಿನ್ ಎಂಟರ್‌ಟೈನ್‌ಮೆಂಟ್' ಎಂಬ ಇಂಗ್ಲೆಂಡ್‌ನ ಸಂಸ್ಥೆ ಗುತ್ತಿಗೆ ಪಡೆದಿದೆ. ಆ ಸಂಸ್ಥೆಯು 'ಲಂಡನ್ ಡಂಜನ್', 'ನ್ಯೂಯಾರ್ಕ್ ಡಂಜನ್', 'ಬರ್ಲಿನ್ ಡಂಜನ್' ಮತ್ತು 'ಹ್ಯಾಂಬರ್ಗ್ ಡಂಜನ್'ಗಳನ್ನೂ ನಿರ್ವಹಿಸುತ್ತಿದೆ.

ಆಮ್‌ಸ್ಟರ್‌ಡ್ಯಾಂಗೆ ಹೋಗುವ ಪ್ರವಾಸಿಗರು ಮಧ್ಯಕಾಲೀನ ಡಚ್ ಇತಿಹಾಸ ಹಾಗೂ ಶಿಕ್ಷೆಗಳ ಬಗ್ಗೆ ತಿಳಿದುಕೊಳ್ಳಲು 'ಆಮ್‌ಸ್ಟರ್‌ಡ್ಯಾಂ ಡಂಜನ್' ಪ್ರದರ್ಶನವನ್ನು ವೀಕ್ಷಿಸಲೇಬೇಕು. ಡಂಜನ್ ಎಂದರೆ ಕತ್ತಲು ತುಂಬಿರುವ ನೆಲಮಾಳಿಗೆಯ ಜೈಲು ಎನ್ನುವ ಅರ್ಥ.

'ಆಮ್‌ಸ್ಟರ್‌ಡ್ಯಾಂ ಡಂಜನ್'ನಲ್ಲಿ 500 ವರ್ಷಗಳ ಡಚ್ ಕರಾಳ ಇತಿಹಾಸಕ್ಕೆ ಜೀವ ತುಂಬುವ ಭಯಾನಕ ಪ್ರದರ್ಶನವನ್ನು ನುರಿತ ನಟರು ನಡೆಸಿಕೊಡುತ್ತಾರೆ. ಅಲ್ಲಿ ಪ್ರೇಕ್ಷಕರಿಗೂ ನಟರಿಗೂ ಅಂತರವಿಲ್ಲ. ಆ ಪ್ರದರ್ಶನಗಳಲ್ಲಿ ಅಂದಿನ ಕಾಲದ ಅತಿ ಭಯಾನಕ ಶಿಕ್ಷೆಗಳನ್ನು ಧ್ವನಿ, ಬೆಳಕು, ಸಾಂದರ್ಭಿಕ ವಾಸನೆಗಳ ಸ್ಪೆಷಲ್ ಎಫೆಕ್ಟ್ಸ್ ಮೂಲಕ ಪ್ರಸ್ತುತಪಡಿಸುತ್ತಾರೆ. ಮಂದ ಬೆಳಕಿನಲ್ಲಿ ಸಾಗುವ ಹತ್ತು ಹಲವು ಅಸಾಧಾರಣ ಪ್ರದರ್ಶನಗಳಲ್ಲಿ ರೋಮಾಂಚನ ಉಂಟುಮಾಡುವ ಪರಿಸರ ಹಾಗೂ ಸೆಟ್ಟಿಂಗ್ಸ್ ಪ್ರೇಕ್ಷಕರನ್ನು ಆಕರ್ಷಿಸುತ್ತವೆ. ಕಂಡು ಕೇಳರಿಯದ, ಮನಸ್ಸಿಗೆ ಮುದ ನೀಡುವ ಐತಿಹಾಸಿಕ ದೃಶ್ಯಗಳನ್ನೊಳಗೊಂಡಿರುವ 'ಆಮ್‌ಸ್ಟರ್‌ಡ್ಯಾಂ ಡಂಜನ್'ನಲ್ಲಿ ಮಧ್ಯಕಾಲೀನ ಯುಗದಲ್ಲಿ ಚಾಲ್ತಿಯಲ್ಲಿದ್ದ ಚಿತ್ರಹಿಂಸೆಯಿಂದ ಕೂಡಿರುವ ಶಿಕ್ಷೆಗಳು, ಪ್ಲೇಗ್ ಕಾಯಿಲೆಯಿಂದ ನರಳುವ ಜನರು ಅನುಭವಿಸುವ ನೋವು, 17ನೇ ಶತಮಾನದ 'ಡಚ್ ಈಸ್ಟ್ ಇಂಡಿಯಾ' ಕಂಪನಿಯ ಹಡಗಿನಲ್ಲಿ ನಡೆಯುವ ಕದನ, ಮೈನವಿರೇಳಿಸುವ ಭಯಾನಕ ದೃಶ್ಯಗಳು, ನೈಜತೆಗೆ ಸೆಡ್ಡುಹೊಡೆಯುವಂತಿರುವ ಶವಗಳು, ಶಸ್ತ್ರಚಿಕಿತ್ಸೆ, ಡಚ್ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ನೀಡಲಾಗುವ ವಿವರಣೆ ಹಾಗೂ ನಟರ ನೈಜ ನಟನೆ ಇವೆಲ್ಲವೂ ಡಂಜನ್ ಪ್ರದರ್ಶನವನ್ನು ಯಶಸ್ವಿಯಾಗಿಸುತ್ತವೆ.

'ಆಮ್‌ಸ್ಟರ್‌ಡ್ಯಾಂ ಡಂಜನ್' ನೋಡಬಯಸುವ ವೀಕ್ಷಕರ ಎದೆ ಗುಂಡಿಗೆ ಗಟ್ಟಿಯಿರಬೇಕು. ದುರ್ಬಲ ಹೃದಯದವರು ಈ ಪ್ರದರ್ಶನವನ್ನು ವೀಕ್ಷಿಸಲೇಬಾರದೆಂದು ಆಯೋಜಕರು ಪ್ರದರ್ಶನಕ್ಕೂ ಮೊದಲೇ ಎಚ್ಚರಿಸುತ್ತಾರೆ. ಪ್ರದರ್ಶನ ಸಂಪೂರ್ಣವಾಗಿ ಮಂದ ಬೆಳಕಿನ ಕೋಣೆಗಳಲ್ಲೇ ನಡೆಯುವುದು ವಿಶೇಷ. ಅಲ್ಲಿ ಎಲ್ಲವೂ ನೈಸರ್ಗಿಕವಾಗಿರುವಂತೆ ಭಾಸವಾಗುತ್ತದೆ. ಕತ್ತಲ ಕೋಣೆಯಲ್ಲಿ, ಧ್ವನಿ, ಸಾಂದರ್ಭಿಕ ವಾಸನೆ ಹಾಗೂ ಬೆಳಕಿನ ಪರಿಣಾಮಗಳನ್ನು ಒಳಗೊಂಡಿರುವ ಪ್ರದರ್ಶನ ಎಂಟೆದೆಯ ಭಂಟರ ಹೃದಯದಲ್ಲೂ ನಡುಕ ಹುಟ್ಟಿಸುವಂತಿರುತ್ತದೆ.

'ಆಮ್‌ಸ್ಟರ್‌ಡ್ಯಾಂ ಡಂಜನ್' ಪ್ರವೇಶಿಸುತ್ತಿದ್ದಂತೆ, ವಿಚಿತ್ರ ವೇಷಭೂಷಣಗಳನ್ನು ತೊಟ್ಟಿರುವ ಸಿಬ್ಬಂದಿ ಸ್ವಾಗತಿಸುತ್ತಾರೆ. ಹೆಣವನ್ನು ಹೆಗಲ ಮೇಲೆ ಹೊತ್ತಿರುವ ಭಯಂಕರ ರೂಪದ ವ್ಯಕ್ತಿ ಒಂದು ಕಡೆಯಿಂದ ಪ್ರತ್ಯಕ್ಷನಾದರೆ, ನಿಮ್ಮ ರುಂಡಮುಂಡಗಳನ್ನು ಬೇರ್ಪಡಿಸುತ್ತೇನೆ ಎಂದು